**ದಿನಾಂಕ:11.12.2023 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟಿಸವಾಲು: ವಾದಿ ಪರ ಶ್ರೀ. ವಿ.ಎ., ವಕೀಲರಿಂದ:**

ವಾದಿ ನನ್ನ ಅತ್ತೆಯ ಮಗ ಇರುತ್ತಾರೆ. ನನ್ನ ಅತ್ತೆಯ ಹೆಸರು ಈರಮ್ಮ ಎಂದಿರುತ್ತದೆ. ಸದರಿ ಈರಮ್ಮ ಅವರ ಮಗಳ ಹೆಸರು ಚೌಡಮ್ಮ ಎಂದಿರುತ್ತದೆ. ಸದರಿ ಚೌಡಮ್ಮ 1 ನೇ ಪ್ರತಿವಾದಿ ಇರುತ್ತಾರೆ. ಸದರಿ ಈರಮ್ಮ ಅವರು ನನ್ನ ತಂದೆಯ ತಂಗಿ ಇರುತ್ತಾರೆ. ನನ್ನ ತಂದೆಯ ಹೆಸರು ವೆಂಕಟೇಶಪ್ಪ ಇರುತ್ತದೆ. ನನ್ನ ತಂದೆಯ ತಂದೆಯ ಹೆಸರು ವೆಂಕಟಪ್ಪ ಇರುತ್ತದೆ. ಈರಮ್ಮ ಅವರು ಮದುವೆಯಾದ ನಂತರವೂ ಸಹಾ ತನ್ನ ತಂದೆ ವೆಂಕಟಪ್ಪ ಅವರ ಮನೆಯಲ್ಲೆ ವಾಸ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು, ಮದುವೆಯಾದ ಕೆಲವು ತಿಂಗಳುಗಳು ಸದರಿ ಈರಮ್ಮ ತಮ್ಮ ತವರು ಮನೆಯಲ್ಲೇ ವಾಸವಿದ್ದರು ನಂತರ ನನ್ನ ಅಜ್ಜ ಸದರಿ ಈರಮ್ಮನಿಗೆ ಸದರಿ ಮನೆಯಲ್ಲಿನ 1/3 ಭಾಗವನ್ನು ಅವರಿಗೆ ದಾನ ಕೊಟ್ಟ ನಂತರ ಅವರು ಸದರಿ ಅವರ ಭಾಗದ ಮನೆಯಲ್ಲಿ ವಾಸ ಇರತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರವನ್ನು ಯಾವ ವರ್ಷದಲ್ಲಿ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾನ ಪತ್ರದಲ್ಲಿ ಮನೆಯಲ್ಲಿ 1/3 ಭಾಗ ಮತ್ತು ಸರ್ವೆ ನಂ.12/1 ರಲ್ಲಿ 1 ಎಕರೆ 10 ಗುಂಟೆ ಮತ್ತು ಸರ್ವೆ ನಂ.06/2 ರಲ್ಲಿ 1 ಎಕರೆ 23 ಗುಂಟೆ ಜಮೀನನ್ನು ಸಹಾ ನೀಡಿರುತ್ತಾರೆ. ನಾನು ಸದರಿ ದಾನಪತ್ರವನ್ನು ನೋಡಿರುವುದಿಲ್ಲ. ಸದರಿ ದಾನ ಪತ್ರದಲ್ಲಿ ಬರೆದುಕೊಟ್ಟ ಆಸ್ತಿಗಳ ಬಗ್ಗೆ ನನ್ನ ಅಜ್ಜ ಹೇಳಿದ್ದರಿಂದ ನನಗೆ ಸದರಿ ವಿಚಾರ ತಿಳಿದು ಬಂದಿರುತ್ತದೆ. ಆ ರೀತಿಯಾಗಿ ನನ್ನ ಅಜ್ಜ ಹೇಳಿ 30 ವರ್ಷಗಳು ಮೇಲ್ಪಟ್ಟು ಆಗಿರುತ್ತದೆ. ನನ್ನ ಅಜ್ಜ ಹಲವಾರು ಸ್ವಯಾರ್ಜಿತ ಆಸ್ತಿಗಳನ್ನು ಸಂಪಾದಿಸಿರುತ್ತಾರೆ. ಸದರಿ ನನ್ನ ಅಜ್ಜನಿ ಸ್ವಯಾರ್ಜಿತ ಆಸ್ತಿಗಳ ಸರ್ವೆ ನಂಬರಗಳ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಅದೇ ರೀತಿ ಸದರಿ ಆಸ್ತಿಗಳು ನನ್ನ ಅಜ್ಜ ಖರೀದಿಸಿರುತ್ತಾರೋ ಅಥವಾ ಅವರಿಗೆ ಮಂಜೂರಾತಿಯಾಗಿರುತ್ತದೆಯೋ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಅಜ್ಜ ವೆಂಕಟಪ್ಪನವರು ಮೂಲತಃ ತಮಿಳುನಾಡು ರಾಜ್ಯದವರು ಎಂದರೆ ಸರಿ.

ಒಬ್ಬ ಈರಪ್ಪ ಎನ್ನುವವರು ಸದರಿ ವೆಂಕಟಪ್ಪನನ್ನು ತಮಿಳುನಾಡಿನಿಂದ ಕರ್ನಾಟದ ಕೋಲಾರ ಜಿಲ್ಲೆಯ ಗಾಂಡ್ಲಹಳ್ಳಿ ಗ್ರಾಮದಲ್ಲಿದ್ದ ಅವರ ಮನೆಗೆ ಕರೆತಂದು ನಂತರ ತಮ್ಮ ತಂಗಿಯನ್ನು ಸದರಿ ವೆಂಕಟಪ್ಪನಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ವೆಂಕಟಪ್ಪ ಕರ್ನಾಕಟಕ್ಕೆ ಬಂದ ನಂತರ ಯಾವುದೇ ಸ್ವಯಾರ್ಜಿತ ಆಸ್ತಿಯನ್ನು ಸಂಪಾದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕಃ25.11.1918 ರಲ್ಲಿ ಸದರಿ ಮೇಲೆ ಹೇಳಿದ ಈರಪ್ಪನವರು ತಮ್ಮ ಆಸ್ತಿಗಳನ್ನು ವೆಂಕಟಪ್ಪ, ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪ ಅವರಿಗೆ ತಲಾ 1/3 ಭಾಗವನ್ನು ಉಯಿಲು ಪತ್ರದಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸದರಿ ಮುನಿಸ್ವಾಮಿ ಅವರು ಮದುವೆಯಾಗದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪ ಅಣ್ಣತಮ್ಮಂದಿರು ಇರುತ್ತಾರೆ ಎಂದರೆ ಸರಿ. ಸದಿರಿ ಉಯಿಲು ಪತ್ರದಂತೆ ಬಂದ ಆಸ್ತಿಗಳನ್ನು ಸದರಿ ವೆಂಕಟಪ್ಪ, ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪ ತಮ್ಮ ಜೀವಿತಾವಧಿಯಲ್ಲಿ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಮುನಿಸ್ವಾಮಿ ಮದುವೆಯಾಗದೇ ಯಾವುದೇ ಮಕ್ಕಳಿಲ್ಲದೆ ಮೃತಪಟ್ಟಿರುವ ಕಾರಣ ಅವರ ಭಾಗದ ಆಸ್ತಿಯ ವಾರಸುದಾರ ಅವರ ಸಹೋದರನಾದ ಮುನಿವೆಂಕಟಪ್ಪ ಇರುತ್ತಾರೆ ಎಂದರೆ ಸರಿ. ಸದರಿ ಮುನಿವೆಂಕಟಪ್ಪನವರೇ ಈರಮ್ಮ ಅವರ ಗಂಡ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಚೌಡಮ್ಮ ಅವರ ತಂದೆಯ ಹೆಸರು ಗುಡಿಯಪ್ಪ ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಚೌಡಮ್ಮ ಅವರ ತಂದೆಯ ಹೆಸರು ಗುಡಿಯಪ್ಪ ಇರುತ್ತದೆ ಎಂದು ಎಲ್ಲಿಯೂ ಹೇಳಿರುವುದಿಲ್ಲ. ಚೌಡಮ್ಮನವರ ಬಾಲ್ಯಕಾಲದಲ್ಲೇ ಅವರ ತಂದೆಯಾದ ಮುನಿವೆಂಕಟಪ್ಪ ಮೃತಪಟ್ಟಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಸದರಿ ವೆಂಕಟಪ್ಪ , ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪನವರು ತಮಗೆ ದಿನಾಂಕಃ 25.11.1918 ರ ಉಯಿಲು ಪತ್ರದಂತೆ ಬಂದ ಆಸ್ತಿಗಳನ್ನು ತಮ್ಮ ನಡುವೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನಾನು ಹೇಳಿರುವುದಿಲ್ಲ. ಸಾಕ್ಷಿ ಮುಂದುವರೆದು,

ಸದರಿ ವಿಚಾರಗಳು ಹಲವಾರು ವರ್ಷಗ ಹಿಂದೆ ನಡೆದಿದ್ದು, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿಯಾಗಿ ಸದರಿ ವೆಂಕಟಪ್ಪ , ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪನವರು ಮೌಖಿಕವಾಗಿ ಯಾವ ವರ್ಷದಂದು ತಮ್ಮ ನಡುವೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಉಯಿಲು ಪತ್ರದಂತೆ ನನ್ನ ಅಜ್ಜನಾದ ವೆಂಕಟಪ್ಪನವರಿಗೆ 1/3 ಹಕ್ಕು ಇರುತ್ತದೆ ಎಂದರೆ ಸರಿ. ಅದೇ ರೀತಿ ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪನವರಿಗೆ ತಲಾ 1/3 ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಮುನಿಸ್ವಾಮಿ ಮದುವೆಯಾಗದೆ ಮೃತಪಟ್ಟಿದ್ದರಿಂದ ಅವರ ತಮ್ಮನಾದ ಮುನಿವೆಂಕಟಪ್ಪನವರೆ ಸದರಿ ಮೃತ ಮುನಿಸ್ವಾಮಿಯವರ 1/3 ಭಾಗದ ವಾರಸುದಾರನಿದ್ದು, ಅದರಂತೆ ಮುನಿವೆಂಕಟಪ್ಪನವರಿಗೆ ತಮ್ಮ ಹಿಸ್ಸೆ ಮತ್ತು ಮೃತ ಮುನಿಸ್ವಾಮಿಯವರ ಹಿಸ್ಸೆ ಸೇರಿ 2/3 ಭಾಗಕ್ಕೆ ಹಕ್ಕುದಾರರು ಇರುತ್ತಾರೆ ಎಂದರೆ ಸರಿ. ಸದರಿ ಮುನಿವೆಂಕಟಪ್ಪರವರು ಮೃತಪಟ್ಟ ನಂತರ ಅವರ ಹೆಂಡತಿ ಮಕ್ಕಳು ಅವರ ಭಾಗದ ಹಕ್ಕುದಾರರು ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ಮುನಿವೆಂಕಟಪ್ಪನವರಿಗೆ ಮದುವೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಈರಮ್ಮನವರ ಗಂಡ ಮುನಿವೆಂಕಟಪ್ಪ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಈರಮ್ಮ ಮತ್ತು ಮುನಿವೆಂಕಟಪ್ಪ ದಂಪತಿಗಳಿಗೆ ಒಬ್ಬ ಮಗ ಮತ್ತು ಒಬ್ಬಳು ಮಗಳು ಇದ್ದರು ಎಂದರೆ ಸರಿಯಲ್ಲ. ವಾದಿ ಸದರಿ ಈರಮ್ಮ ಮತ್ತು ಮುನಿವೆಂಕಟಪ್ಪನವರ ಮಗನಿದ್ದು ಮತ್ತು 1 ನೇ ಪ್ರತಿವಾದಿ ಅವರ ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ನಾನು ಹೇಳುವಂತೆ 1 ನೇ ಪ್ರತಿವಾದಿ ಗುಡಿಯಪ್ಪನವರ ಮಗಳು ಇರುತ್ತಾಳೆ ಎಂದು ತೋರಿಸಲು ನಾನು ಯಾವುದೇ ದಲಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಸದರಿ ಮೇಲೆ ಹೇಳಿದ ಉಯಿಲು ಪತ್ರದಂತೆ ತಮ್ಮ ಭಾಗಕ್ಕೆ ಬಂದ 1/3 ಹಿಸ್ಸೆಯನ್ನು ಅವರ ಜೀವಿತ ಕಾಲದಲ್ಲಿ ವೆಂಕಟಪ್ಪ , ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪ ತಮ್ಮ ನಡುವೆ ವಿಭಾಗ ಮಾಡಿಕೊಂಡಿರುವುದಿಲ್ಲ ಮತ್ತು ತಮ್ಮ ಹೆಸರಿಗೆ ಖಾತೆಕೂಡ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ನನ್ನ ಅಜ್ಜನಾದ ವೆಂಕಟಪ್ಪನವರಿಗೆ ಮೂರು ಜನ ಮಕ್ಕಳು ಇದ್ದರು ಎಂದರೆ ಸರಿ. ಅವರುಗಳು ವೆಂಕಟೇಶಪ್ಪ, ಕೃಷ್ಣಪ್ಪ ಮತ್ತು ಈರಮ್ಮ ಇರುತ್ತಾರೆ ಎಂದರೆ ಸರಿ. ನಾನು

ಸದರಿ ವೆಂಕಟೇಶಪ್ಪನವರ ಮಗ ಇರುತ್ತೇನೆ ಎಂದರೆ ಸರಿ. ಅದೇ ರೀತಿ ಮುನಿಯಪ್ಪನವರು ಕೃಷ್ಣಪ್ಪನವರ ಮಗ ಇರುತ್ತಾರೆ ಎಂದರೆ ಸರಿ. ಶ್ರೀನಿವಾಸಗೌಡ ಮತ್ತು ಚೌಡಮ್ಮ ಸದರಿ ಈರಮ್ಮನವರ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಅಜ್ಜನಿಗೆ ಬಂದ 1/3 ಹಿಸ್ಸೆಗೆ ಮಾತ್ರ ನಾವು ಹಕ್ಕುದಾರರು ಇರುತ್ತೇವೆ ಎಂದರೆ ಸರಿ. ಅದೇ ರೀತಿ ಈರಮ್ಮನವರ ಮಕ್ಕಳಾದ ಶ್ರೀನಿವಾಸಗೌಡ ಮತ್ತು ಚೌಡಮ್ಮ ತಮ್ಮ ತಂದೆಯ ಹಿಸ್ಸೆಗೆ ಬಂದ 2/3 ಹಿಸ್ಸೆಗೆ ವಾರಸುದಾರರು ಇರುತ್ತಾರೆ ಎಂದರೆ ಸರಿಯಲ್ಲ. ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪನವರ ಭಾಗದ ಹಿಸ್ಸೆಯನ್ನು ಅವರ ವಾರಸುದಾರರುಗಳು ಅನುಭವಿಸುಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ವಾರಸುದಾರರು ಇರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಗಾಂಡ್ಲಹಳ್ಳಿ ಗ್ರಾಮದ ಸರ್ವೆ ನಂ.06/2 ಮತ್ತು 105 ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಪೌತಿವಾರಸು ಮುಖಾಂತರ ಖಾತೆ ವರ್ಗಾವಣೆ ಮಾಡಲು ಅರ್ಜಿ ಕೊಟ್ಟ ಕಾಲಕ್ಕೆ ಸದರಿ ಈರಮ್ಮ ಕೋಂ ಮುನಿವೆಂಕಟಪ್ಪ, ಶ್ರೀನಿವಾಸಗೌಡ ಬಿನ್ ಮುನಿವೆಂಕಟಪ್ಪ ಮತ್ತು ಚೌಡಮ್ಮ ಬಿನ್ ಮುನಿವೆಂಕಟಪ್ಪನವರು ಸದರಿ ಖಾತೆ ವರ್ಗಾವಣೆಯಾಗಲು ತಮ್ಮ ತಕರಾರು ಇರುವುದಿಲ್ಲ ಎಂದು ಹೇಳಿಕೆ ಕೊಟ್ಟ ನಂತರ ನನ್ನ ಹೆಸರಿಗೆ ಸದರಿ ಆಸ್ತಿಗಳ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವ ನನ್ನ ಅಜ್ಜನಾದ ವೆಂಕಟಪ್ಪ ಬರೆದುಕೊಟ್ಟ ದಾನ ಪತ್ರದಲ್ಲಿ ಈರಮ್ಮ ತನ್ನ ಮಗಳಿದ್ದು, ಆಕೆಗೆ ಲಗ್ನ ಆದಾಗಲಿಂದಲೂ ಆಕೆ ತಂದೆಯ ಮನೆಯಲ್ಲೆ ವಾಸ ಇರುವುದಾಗಿ ನಮೂದು ಇದೆ ಎಂದರೆ ಸರಿ. ಸದರಿ ದಾನ ಪತ್ರದ ಕಾಲಕ್ಕೆ ಈರಮ್ಮ ಅವರಿಗೆ ಮದುವೆಯಾಗಿತ್ತು ಎಂದರೆ ಸರಿ. ಸದರಿ ಈರಮ್ಮನವರಿಗೆ ಮದುವೆಯಾಗಿದ್ದರೂ ಸಹಾ ಅವರ ಗಂಡನ ಹೆಸರನ್ನು ಸದರಿ ದಾನಪತ್ರದಲ್ಲಿ ಉದ್ದೇಶ ಪೂರ್ವಕವಾಗಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ವೆಂಕಟಪ್ಪನವರು ತನ್ನ ಹಿಸ್ಸೆಗೆ ಬಂದ ಆಸ್ತಿಯೊಂದಿಗೆ ಸದರಿ ಮುನಿಸ್ವಾಮಿ ಮತ್ತು ಮುನಿವೆಂಕಟಪ್ಪನವರ ಭಾಗದ ಹಿಸ್ಸೆಯನ್ನು ಸಹಾ ಮೋಸದಿಂದ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಈ ಮೊದಲು ಆತನ ತಂಗಿಯಾದ ಚೌಡಮ್ಮ ಮತ್ತು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ: 127/2012 ಎಂದು ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ

ನಾನು ವಕೀಲರನ್ನು ಸಹಾ ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾವು ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ಕಂಡುಬರುವ 2 ನೇ ಪ್ರತಿವಾದಿ ನಾನೇ ಇರುತ್ತೇನೆ. ಸದರಿ ದಾವೆಯಲ್ಲಿ ಒಂದು ಮನೆ ಮತ್ತು ಎರಡು ಸರ್ವೆ ನಂಬರ್ ಆಸ್ತಿಗಳು ವಾದಿಗೆ ಸೇರಬೇಕು ಎಂದು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ.5 ನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಓದಿ ಹೇಳುವಂತೆ ಕೇಳಿದಾಗ ಸಾಕ್ಷಿಯು ಆ ಸಂದರ್ಭದಲ್ಲಿ ತನ್ನ ಕಣ್ಣುಗಳಿಗೆ ಪೊರೆಬಂದಿದ್ದು, ವಾದಿ ನನ್ನನ್ನು ಮೋಸದಿಂದ ಕರೆದುಕೊಂಡು ಬಂದು ಸದರಿ ರಾಜೀ ಅರ್ಜಿಗೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಇರುವ ಎಲ್ಲಾ ವಿಚಾರಗಳ ಬಗ್ಗೆ ನನಗೆ ಈಗ ನೆನೆಪಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವಂತೆ ಅಸಲು ದಾವೆ ಸಂಖ್ಯೆ: 112/95, ಆರ್.ಎ. ನಂ.38/2003 ಮತ್ತು ಆರ್.ಎಸ್.ಎ. ನಂ.770/2004 ಯಾವ ಕಾರಣದಿಂದ ವಜಾಗೊಂಡಿರುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ತನ್ನ ತಂದೆಯ ಹೆಸರು ಗುಡಿಯಪ್ಪ ಅಲ್ಲ ಮುನಿವೆಂಕಟಪ್ಪ ಇರುತ್ತದೆ ಎಂದು ನ್ಯಾಯಾಲಯದಲ್ಲಿ ದಾವೆ ಹೂಡಿ ಅದನ್ನು ಸರಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನ್ಯಾಯಾಲಯದ ಆದೇಶದಂತೆ ವಾದಿ ತನ್ನ ತಂದೆಯ ಹೆಸರು ಮುನಿವೆಂಕಟಪ್ಪ ಎಂದು ತನ್ನ ಎಲ್ಲಾ ಶಾಲಾ ದಾಖಲೆಗಳು ಮತ್ತು ಇತ್ಯಾದಿ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈಗ ಓದಿ ಹೇಳಿರುವ ಎಂ.ಆರ್.ನಂ.430 ರಲ್ಲಿ ಸರ್ವೆ ನಂ.31/2 ರಲ್ಲಿ 4 ಎಕರೆ 9 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಆದ ಮುಟೇಶನ್ ಆದೇಶ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ.23 ಎಂದು ಗುರುತಿಸಲಾಯಿತು. ಸದರಿ ನಿಪಿ.23 ರ ದಾಖಲೆಯನ್ನು ವಾದಿ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಮೋಸದಿಂದ

ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ಮೋಸದಿಂದ ಸದರಿ ಮುಟೇಶನ್ ಆದೇಶ ಮಾಡಿಕೊಂಡಿರುವುದನ್ನು ನಾನು ನೋಡಿರುವುದಿಲ್ಲ.

ನಾರಾಯಣಸ್ವಾಮಿ ಬಿನ್ ಮಾರಪ್ಪ ನಮ್ಮ ಊರಿನವರು ಇರುತ್ತಾರೆ. ನನಗೆ ಅವರ ಪರಿಚಯ ಇರುತ್ತದೆ. ಈಗ ನ್ಯಾಯಾಲಯದಲ್ಲಿ ಉಪಸ್ಥಿತರಿರುವ 5 ನೇ ಪ್ರತಿವಾದಿಯೇ ಸದರಿ ನಾರಾಯಣಸ್ವಾಮಿ ಇರುತ್ತಾರೆ ಎಂದರೆ ಸರಿ. ಸದರಿ ನಾರಾಯಣಸ್ವಾಮಿ ಅವರ ಮೂಲಕ ವಾದಿ ಮತ್ತು ವಾದಿಯ ತಾಯಿಯಾದ ಈರಮ್ಮನವರ ವಿರುದ್ಧ ಅಸಲು ದಾವೆ ಸಂಖ್ಯೆ: 18/1997 ಎಂದು ಒಂದು ದಾವೆಯನ್ನು ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆ ವಜಾ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ನನ್ನ ಮತ್ತು ನನ್ನ ತಮ್ಮ ಕೃಷ್ಣಪ್ಪನವರ ನಡುವೆ ಈಗಾಗಲೇ ವಿಭಾಗ ಆಗಿರುತ್ತದೆ ಎಂದು ಎಲ್ಲಿಯೂ ನಮೂದಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನೆಲ್ಲಾ ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ವಾದಿಯ ತಂದೆ ಮುನಿವೆಂಕಟಪ್ಪ ಇರುತ್ತಾರೆ ಎಂದು ನನಗೆ ತಿಳಿದಿದ್ದರೂ ಸಹಾ ಸದರಿ ಮುನಿವೆಂಕಟಪ್ಪನಿಗೆ ಮಕ್ಕಳೇ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1918 ರ ಉಯಿಲು ಪತ್ರದಂತೆ ನನ್ನ ಅಜ್ಜನಿಗೆ ಕೇವಲ 1/3 ಹಿಸ್ಸೆಗೆ ಮಾತ್ರ ಹಕ್ಕು ಇದ್ದರು ಸಹಾ ನನ್ನ ಅಜ್ಜ ಸಂಪೂರ್ಣ ಆಸ್ತಿಯನ್ನು ತನ್ನ ಹೆಸರಿಗೆ ಕಾನೂನುಬಾಹಿರವಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನನ್ನ ಅಜ್ಜ ಮೃತಪಟ್ಟ ನಂತರ ನಾನು ಕಾನೂನುಬಾಹಿರವಾಗಿ ಸದರಿ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಖಾತೆ ನನ್ನ ಹೆಸರಿನಲ್ಲಿ ಇದ್ದರೂ ಸಹಾ ವಾದಿ ತನ್ನ ಅಜ್ಜನ ಹಿಸ್ಸೆಗೆ ಬಂದ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದೊಂದಿಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ದಾಖಲೆಗಳನ್ನು ಹಾಜರುಪಡಿಸಿದರೆ ನಿಜಾಂಶ ನ್ಯಾಯಾಲಯದ ಗಮನಕ್ಕೆ ಬರುತ್ತದೆ ಎನ್ನುವ ಕಾರಣ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಕರಾರು ಸಲ್ಲಿಸಲು ವಕೀಲರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ವಾದಿಯು ಮುನಿವೆಂಕಟಪ್ಪನವರ ಮಗ ಇರುತ್ತಾರೆ ಎಂದು ಗೊತ್ತಿದ್ದರೂ ಸಹಾ ವಾದಿಯ

ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ತಾಯಿಯಾದ ಈರಮ್ಮ ನಮ್ಮ ಮನೆಯಲ್ಲೇ ವಾದಿ ಇದ್ದು, ಆ ಸಂದರ್ಭದಲ್ಲಿ ವಾದಿಯ ತಂದೆಯ ಹೆಸರು ಮುನಿವೆಂಕಟಪ್ಪ ಎಂದಿದ್ದರೂ ಸಹಾ ನಾವು ವಾದಿಯನ್ನು ಶಾಲೆಗೆ ಸೇರಿಸುವಾಗ ಅವರ ತಂದೆಯ ಹೆಸರನ್ನು ಗುಡಿಯಪ್ಪ ಎಂದು ತಪ್ಪಾಗಿ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ತಪ್ಪನ್ನು ವಾದಿ ನ್ಯಾಯಾಲಯದಲ್ಲಿ ದಾವೆ ಹೂಡಿ ಸರಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.